**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಮಾತಂವಿ/17/ಟೆಲಿಶಿಕ್ಷಣ/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001,
ದಿನಾಂಕ: 15.02.2020

**ಸುತ್ತೋಲೆ**

ವಿಷಯ: ಟೆಲಿಶಿಕ್ಷಣ ಕಾರ್ಯಕ್ರಮ ಅನುಷ್ಠಾನಗೊಳ್ಳುತ್ತಿರುವ ಸರ್ಕಾರಿ ಪದವಿ ಕಾಲೇಜುಗಳ ಉಪನ್ಯಾಸಕರಿಗೆ ದಿನಾಂಕ:27-02-2020 ರಂದು IIM, ಬೆಂಗಳೂರು ಆಯೋಜಿಸುತ್ತಿರುವ ಕಾರ್ಯಾಗಾರದ ಕುರಿತು.

ಉಲ್ಲೇಖ: ದಿನಾಂಕ: 14-02-2020ರಂದು ಸ್ವೀಕೃತವಾದ IIM, ಬೆಂಗಳೂರು ಇವರ ಇ-ಮೇಲ್

* * * * *

ಕಲ್ಯಾಣ ಕರ್ನಾಟಕ ಪ್ರದೇಶವೂ ಸೇರಿದಂತೆ ರಾಜ್ಯದ ವಿವಿಧ ಸ್ಥಳಗಳಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗಾಗಿ ಟೆಲಿಶಿಕ್ಷಣದ ಮೂಲಕ ಆಂಗ್ಲಭಾಷಾ ಪ್ರಾವೀಣ್ಯತೆಯ ತರಗತಿಗಳು ನಡೆಯುತ್ತಿವೆ. ಈ ಕಾರ್ಯಕ್ರಮವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಡೆಸುವ ಉದ್ದೇಶದಿಂದ ಈ ಕಾಲೇಜುಗಳ ಆಂಗ್ಲಭಾಷಾ ಬೋಧಕರಿಗಾಗಿ Indian Institute of Management (IIM), ಬೆಂಗಳೂರು ಇವರು ದಿನಾಂಕ:27-02-2020ರಂದು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸುತ್ತಿದ್ದಾರೆ.

ಈ ಕಾರ್ಯಾಗಾರಕ್ಕೆ ಅನುಬಂಧದಲ್ಲಿ ಪಟ್ಟಿ ಮಾಡಲಾಗಿರುವ ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರು ತಮ್ಮ ಕಾಲೇಜಿನಿಂದ ಒಬ್ಬರು ಆಂಗ್ಲಭಾಷಾ ಉಪನ್ಯಾಸಕರನ್ನು/ಆಂಗ್ಲಭಾಷಾ ಅತಿಥಿ ಉಪನ್ಯಾಸಕರನ್ನು (ಸೇವಾ, ಜ್ಯೇಷ್ಠತೆಯ ಮೇರೆಗೆ) ಅಥವಾ ಟೆಲಿಶಿಕ್ಷಣ ಕಾರ್ಯಕ್ರಮದ ಕಾಲೇಜಿನ ಸಮನ್ವಯಾಧಿಕಾರಿಗಳನ್ನು ಕಡ್ಡಾಯವಾಗಿ ನಿಯೋಜಿಸಿ, ಅವರು ಸದರಿ ಕಾರ್ಯಾಗಾರಕ್ಕೆ ದಿನಾಂಕ:27-02-2020ರಂದು ಬೆಳಿಗ್ಗೆ 9:00 ಗಂಟೆಗೆ IIMB, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076 ಇಲ್ಲಿ ವರದಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ, ಹೆಚ್ಚಿನ ಮಾಹಿತಿಗಾಗಿ ಡಾ.ಜಿ.ರವಿ ಕೋಲಾರ್‌ಕರ್ ಅವರನ್ನು ಮೊಬೈಲ್ ಸಂಖ್ಯೆ:9845766238 ನಲ್ಲಿ ಸಂಪರ್ಕಿಸುವುದು.

**ಕಾಲೇಜು ಶಿಕ್ಷಣ ಆಯುಕ್ತರು**

ಇವರಿಗೆ:

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲ್ಬುರ್ಗಿ - ಮಾಹಿತಿ ಹಾಗು ಅಗತ್ಯ ಕ್ರಮಕ್ಕಾಗಿ
2. ಅನುಬಂಧದಲ್ಲಿ ಪಟ್ಟಿ ಮಾಡಲಾಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ -ಮಾಹಿತಿ ಹಾಗು ಅಗತ್ಯ ಕ್ರಮಕ್ಕಾಗಿ
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು- ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
4. ಕಛೇರಿ ಪ್ರತಿ.